**ಕರ್ನಾಟಕ ಸರ್ಕಾರ**
**(ಸಿ.ಆರ್.ಪಿ.67)**

**ಹೇಳಿಕೆ ಹಾಳೆ**
**(ಆರ್.ಪಿ.ಸಂಖ್ಯೆ 57)**
**ನಮೂನೆ ಸಂಖ್ಯೆ 4**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 158/2023**

**ಫ್ರಾಸಾ- 1 ಚಾಸಾ- 1**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಅನಿತಾ ಎಂ ಜೆ |
| ಗಂಡನ ಹೆಸರುಃ | : | ರಾಜು |
| ವಯಸ್ಸುಃ | : | 43 ವರ್ಷ |
| ಉದ್ಯೋಗಃ | : | ಅಬಕಾರಿ ನಿರೀಕ್ಷಕರು |
| ವಾಸ | : | ಹಾಸನ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 06-01-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಆಗಸ್ಟ್ 2019ರಿಂದ ಸೆಪ್ಟೆಂಬರ್ 2022ರವರೆಗೆ ಅಬಕಾರಿ ನಿರೀಕ್ಷಕಳಾಗಿ ಚನ್ನರಾಯಪಟ್ಟಣ ವಲಯ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 29-10-2022ರಂದು ಬೆಳಿಗ್ಗೆ 8-15ಗಂಟೆಗೆ ನಾನು ಕಛೇರಿಯಲ್ಲಿದ್ದಾಗ ಬಾತ್ಮಿದಾರರು ಕರೆ ಮಾಡಿ ಶ್ರವಣಬೆಳಗೊಳ ಹಿರಿಸಾವೆ ಮಾರ್ಗವಾಗಿ ದ್ವಿಚಕ್ರ ವಾಹನ ಸಂಖ್ಯೆ ಕೆಎ-01-ಹೆಚ್ ಜಿ 9427ರಲ್ಲಿ ಓರ್ವ ವ್ಯಕ್ತಿ ಗಾಂಜಾ ಸಾಗಾಣಿಕೆ ಮಾಡುತ್ತಿದ್ದಾರೆ ಎಂದು ಮಾಹಿತಿ ತಿಳಿಸಿದರು. ಅದರಂತೆ ನಾನು ಬಂದ ಮಾಹಿತಿಯನ್ನು ಇಲಾಖಾ ಮೇಲಧಿಕಾರಿಗಳಿಗೆ ಲಿಖಿತವಾಗಿ ತಿಳಿಸಿ ಅವರು ನೀಡಿದ ಮೌಖಿಕ ಅನುಮತಿಯಂತೆ ಸಿಬ್ಬಂದಿಗಳಾದ ಚಾಸಾ-4 ರಿಂದ 6ರವರನ್ನು ಕರೆದುಕೊಂಡು ಇಲಾಖಾ ವಾಹನದಲ್ಲಿ ಕರೆದುಕೊಂಡು ಹಿರಿಸಾವೆ ಗ್ರಾಮಕ್ಕೆ ಬಂದೆನು. ಅಲ್ಲಿ ಬಸ್ ನಿಲ್ದಾಣದಲ್ಲಿ ಇದ್ದ ಇಬ್ಬರು ವ್ಯಕ್ತಿಗಳಾದ ಚಾಸಾ-2 ಮತ್ತು 3 ರವರಿಗೆ ನಮ್ಮ ಪರಿಚಯವನ್ನು ಹೇಳಿ ಬಂದ ಮಾಹಿತಿ ಬಗ್ಗೆ ತಿಳಿಸಿ ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡು ಲಿಖಿತ ನೋಟೀಸು ನೀಡಿದೆನು. ಸದರಿ

ನೋಟೀಸನ್ನು ಈಗ ನೋಡುತ್ತಿದ್ದು ನಿಪಿ-1 ಮತ್ತು 2 ಎಂದು ಅದರಲ್ಲಿ ನನ ರುಜು ಇದ್ದು ನಿಪಿ-1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು. ನಂತರ ಪಂಚರ ಸಮಕ್ಷಮ ಹಿರಿಸಾವೆಯಿಂದ ಶ್ರವಣಬೆಳಗೊಳಕ್ಕೆ ಹೋಗುವ ಮಾರ್ಗಮಧ್ಯೆ ಇರುವ ಬ್ರಿಡ್ಜ್ ಬಳಿ ರಸ್ತೆಗಾವಲು ನಡೆಸುತ್ತಿದ್ದಾಗ ಶ್ರವಣಬೆಳಗೊಳದ ಕಡೆಯಿಂದ ಒಬ್ಬ ವ್ಯಕ್ತಿ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದರು. ಅವರನ್ನು ತಡೆದು ನಿಲ್ಲಿಸಿ ಪರಿಶೀಲಿಸಿದಾಗ ಬಾತ್ಮಿದಾರರು ನೀಡಿರುವ ವಾಹನ ಸಂಖ್ಯೆಗೆ ತಾಳೆಯಾಯಿತು. ಸದರಿ ವಾಹನವನ್ನು ಚಲಾಯಿಸುತ್ತಿದ್ದ ವ್ಯಕ್ತಿಗೆ ಸದರಿ ವಾಹನದಲ್ಲಿ ಗಾಂಜಾ ಸಾಗಿಸುತ್ತಿದ್ದೀರ ಎಂಬ ಮಾಹಿತಿ ಬಂದಿದೆ ಎಂದು ಅದನ್ನು ಶೋಧನೆ ಮಾಡಲು ಸಹಕರಿಸಬೇಕಾಗಿ ತಿಳಿಸಿದೆನು. ಅದಕ್ಕೆ ಆತ ಒಪ್ಪಿಕೊಂಡನು. ಶೋಧನೆ ನಡೆಸಲು ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆಯಲು ಸಮಯ ಇಲ್ಲದ ಕಾರಣ ಸ್ಥಳದಲ್ಲಿ ಸಕಾರಣ ನಮೂದಿಸಿ ಶೋಧನಾ ಸಮುಚಿತ ಆಧಾರವನ್ನು ನಿಪಿ-3ರಂತೆ ತಯಾರಿಸಿಕೊಂಡೆನು. ಅದರಲ್ಲಿ ನನ್ನ ರುಜು ಇದ್ದು ನಿಪಿ-3(ಎ) ಎಂದು ಗುರುತಿಸಲಾಯಿತು. ನಂತರ ವಾಹನವನ್ನು ಶೋಧನೆ ಮಾಡಿದಾಗ ಸದರಿ ವಾಹನದ ಮುಂಭಾಗದ ಫುಟ್ ರೆಸ್ಟ್ ನಲ್ಲಿ ಕಪ್ಪುಬಣ್ಣದ ಪ್ಲಾಸ್ಟಿಕ್ ಕವರ್ ಕಂಡುಬಂತು. ಸದರಿ ವ್ಯಕ್ತಿಯಲ್ಲಿ ಆ ಕವರಿನಲ್ಲಿ ಏನಿದೆ ಎಂದು ಕೇಳಿದಾಗ ತಡವರಿಸಿದರು. ಸಿಬ್ಬಂದಿ ಸಹಾಯದಿಂದ ಅದನ್ನು ಅಲ್ಲಿಂದ ತೆಗೆಸಿ ತೆರೆದು ನೋಡಿದಾಗ ಅದರಲ್ಲಿ ಘಾಟುವಾಸನೆಯಿಂದ ಕೂಡಿದ ತೆನೆ, ಬೀಜ ಹೂಗಳಿಂದ ಕೂಡಿದ ಗಾಂಜಾ ಇರುವುದು ಕಂಡುಬಂತು. ಅದನ್ನು ಎಲ್ಲಿಂದ ಯಾವ ಉದ್ದೇಶಕ್ಕೆ ತಂದಿದ್ದೀರೆಂದು ಕೇಳಿದಾಗ ಮಾರಾಟದ ಉದ್ದೇಶದಿಂದ ತಂದಿರುವುದಾಗಿ ಮಾತ್ರ ಉತ್ತರಿಸಿರುತ್ತಾರೆ. ಅದನ್ನು ಹೊಂದಲು ಪರವಾನಿಗೆ ಇದೆಯಾ ಎಂದು ಕೇಳಿದಾಗ ಇಲ್ಲ ಎಂದು ತಿಳಿಸಿದರು. ನಾವು ಕಛೇರಿಯಿಂದ ತೆಗೆದುಕೊಂಡು ಹೋಗಿದ್ದ ಡಿಜಿಟಲ್ ತೂಕಮಾಪನದಲ್ಲಿ ತೂಕ ಮಾಡಿ ನೋಡಿದಾಗ ಅದು ಒಟ್ಟು 1.625ಕೆಜಿ ಇತ್ತು. ಆರೋಪಿತರ ಹೆಸರು ವಿಳಾಸ ಕೇಳಿದಾಗ ತನ್ನ ಹೆಸರು ಅಮೀರ್ ಹುಸೇನ್, ತಂದೆ ಹಂಸುದ್ದಿನ್ ಮಿಯಾ, 24 ವರ್ಷ,ಬಾಲಾಕುರ ಗ್ರಾಮ, ಬಿನಟ ತಾಲ್ಲೂಕು, ಕೋಸ್ಟ್ ಬಿಹಾರ್ ಜಿಲ್ಲೆ ಎಂದು ಕನ್ನಡ ಭಾಷೆಯಲ್ಲಿ ತಿಳಿಸಿದರು. ಆತನಿಗೆ ಅದನ್ನು ಹೊಂದಲು ಪರವಾನಿಗೆ ಇಲ್ಲದ್ದರಿಂದ ಆ ರೀತಿ ಸಾಗಾಣಿಕೆ ಮಾಡಲು ಶಿಕ್ಷಾರ್ಹ ಅಪರಾಧ ಎಂದು ತಿಳಿಸಿ ಆತನ ಮೇಲೆ ದಸ್ತಗಿರಿ ಮಾಡಿ ದೊರೆತ ಮುದ್ದೆಮಾಲು ಮತ್ತು ದ್ವಿಚಕ್ರವಾಹನವನ್ನು ವಶಕ್ಕೆ ಪಡೆದೆನು, ನಂತರ ಆ ಮುದ್ದೆಮಾಲನ್ನು ಒಂದು ಬ್ಯಾಗಿಗೆ ಹಾಕಿ ಪ್ಯಾಕು ಮಾಡಿ ಸೀಲು ಮಾಡಿ ಪಂಚರ ಸಹಿ ಇರುವ ಚೀಟಿ ಅಂಟಿಸಿ ಸಹಿ ಪಡೆದೆನು. ಇವೆಲ್ಲವನ್ನು ವಶಪಡಿಸಿಕೊಂಡು ನಿಪಿ-4 ರಂತೆ ಪಂಚನಾಮೆ ನಡೆಸಿದೆನು.

ಅದರಲ್ಲಿ ನನ್ನ ರುಜು ಇದ್ದು ನಿಪಿ-4(ಎ) ಎಂದು ಗುರುತಿಸಲಾಯಿತು. ನಂತರ ವಶಪಡಿಸಿಕೊಂಡ ವಸ್ತುಗಳು ಮತ್ತು ಆರೋಪಿಯೊಂದಿಗೆ ಠಾಣೆಗೆ ವಾಪಸ್ ಬಂದೆನು. ನಂತರ ಸ್ವಪಿರ್ಯಾದನ್ನು ನಿಪಿ-5ರಂತೆ ತಯಾರಿಸಿ ಠಾ ಣಾ ಮೊ.ಸಂ.42/22-23ರಂತೆ ಕೇಸು ದಾಖಲಿಸಿ ಪ್ರ.ವ.ವ.ವನ್ನು ನಿಪಿ-6 ರಂತೆ ನ್ಯಾಯಾಲಯಕ್ಕೂ, ಪ್ರತಿಯನ್ನು ಮೇಲಧಿಕಾರಿಗಳಿಗೂ ಸಲ್ಲಿಸಿರುತ್ತೇನೆ. ನಿಪಿ-5 ಮತ್ತು 6ರಲ್ಲಿ ನನ್ನ ರುಜುಗಳಿದ್ದು ನಿಪಿ-5(ಎ) ಮತ್ತು 6(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲದಲ್ಲಿ ಈಗ ನೋಡುತ್ತಿರುವ 4 ಫೋಟೋಗಳನ್ನು ತೆಗೆಸಿರುತ್ತೇನೆ. ಅವುಗಳನ್ನು ನಿಪಿ-7 ರಿಂದ 10 ಎಂದು ಗುರುತಿಸಲಾಯಿತು. ಅದಕ್ಕೆ ಸಂಬಂಧಿಸಿದ ಸಿಡಿ ನೋಡುತ್ತಿದ್ದು ನಿಪಿ-11 ಎಂದು ಗುರುತಿಸಲಾಯಿತು. ಅದಕ್ಕೆ ಸಂಬಂಧಪಟ್ಟಂತೆ ಭಾ.ಸಾ.ಅ.ಕಲಂ.65ಬಿ ಅಡಿ ದೃಢಪತ್ರವನ್ನು ನಿಪಿ-12ರಂತೆ ನೀಡಿರುತ್ತೇನೆ. ಅದರಲ್ಲಿ ನನ್ನ ರಜು ಇದ್ದು ನಿಪಿ-12(ಎ) ಎಂದು ಗುರುತಿಸಲಾಯಿತು. ವಶಪಡಿಸಿಕೊಂಡ ಮಾಲುಗಳನ್ನು ಪಿ ಎಫ್ ನಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಆ ದಿವಸ ದಸ್ತಗಿರಿ ಮಾಡಿದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಆತ ನ್ಯಾಯಾಲಯದ ಮುಂದೆ ಹಾಜರಿದ್ದಾನೆ. ವಶಪಡಿಸಿಕೊಂಡ ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ದ್ವಿಚಕ್ರವಾಹನ ನಿಪಿ-8ರ ಫೋಟೋದಲ್ಲಿ ಕಂಡುಬರುತ್ತಿದೆ. (ಮಾನ್ಯ ಅಭಿಯೋಜಕರು ನ್ಯಾಯಾಲಯದ ಮುಂದೆ ಇರುವ ಬಟ್ಟೆಯಿಂದ ಪ್ಯಾಕು ಮಾಡಿ ಸೀಲು ಮಾಡಿರುವ ಒಂದು ಪ್ಯಾಕೇಟನ್ನು ಒಡೆಯಲು ಅನುಮತಿ ಕೋರಿದ್ದು, ಅನುಮತಿ ನೀಡಿದೆ) ಬಟ್ಟೆಯಿಂದ ಪ್ಯಾಕು ಮಾಡಿದ ಸೀಲಾದ ಪ್ಯಾಕನ್ನು ತೆರೆದು ಅದರೊಳಗಿರುವ ವಸ್ತುವನ್ನು ತೋರಿಸಿದಾಗ ವಶಪಡಿಸಿಕೊಂಡ ಮಾದರಿ ಗಾಂಜಾ ಇದೆ ಎಂದು ಗುರುತಿಸಿರುತ್ತಾರೆ. ಅದನ್ನು ಎಂ.ಒ.1 ಎಂದು ಗುರುತಿಸಲಾಯಿತು. ಪ್ಯಾಕು ಮಾಡಿದ ಬಟ್ಟೆಯನ್ನು ಎಂ.ಒ.1(1) ಎಂದು ಅದರ ಮೇಲೆ ಅಂಟಿಸಿರುವ ಚೀಟಿಯನ್ನು ಎಂಒ.1(2) ಎಂದು ಸಹಿಯನ್ನು ಎಂ.ಒ.1(2ಎ) ಎಂದು ಗುರುತಿಸಲಾಯಿತು. ನಂತರ ಆರೋಪಿಯ ಸ್ವಇಚ್ಛಾ ಹೇಳಿಕೆ ಮಾಡಿಕೊಂಡಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ನಿಪಿ-13 ಎಂದು ಗುರುತಿಸಲಾಯಿತು. ಅದಕ್ಕೆ ಆರೋಪಿತರ ಹೆಬ್ಬೆಟ್ಟಿನ ಸಹಿ ಪಡೆದಿರುತ್ತೇನೆ. ಸಾಕ್ಷಿ ಗುರುತಿಸಿದ ಆರೋಪಿತರ ಹೆಬ್ಬೆಟ್ಟಿನ ಗುರುತನ್ನು ನಿಪಿ-13(ಎ) ಎಂದು ಸಾಕ್ಷಿಯ ರುಜುವನ್ನು ನಿಪಿ-13(ಬಿ) ಎಂದು ಗುರುತಿಸಲಾಯಿತು.

3.ದಿನಾಂಕ 8-11-2022ರಂದು ವಶಪಡಿಸಿಕೊಂಡ ಮುದ್ದೆಮಾಲುಗಳನ್ನು ಚನ್ನರಾಯಪಟ್ಟಣ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಇನ್ವೆಂಟರಿ ಮಾಡಿಸಿರುತ್ತೇನೆ, ಹಾಗೂ ತಲಾ 20ಗ್ರಾಂ ನಂತೆ 2 ಪ್ಯಾಕೇಟಿನಲ್ಲಿ ಮಾದರಿ ಗಾಂಜಾ ತೆಗೆಸಿರುತ್ತೇನೆ. ಸದರಿ ಇನ್ವೆಂಟರಿಯನ್ನು ಈಗ ನೋಡುತ್ತಿದ್ದು ನಿಪಿ-14 ಎಂದು ಗುರುತನ್ನು. ಅದು ಅನುಬಂಧ 1 ಮತ್ತು 2  ನ್ನು ಒಳಗೊಂಡಿರುತ್ತದೆ. ಅದರಲ್ಲಿ ನ್ಯಾಯಾಧೀಶರು ಮಾಡಿರುವ ದೃಢಪತ್ರವನ್ನು ಈಗ ನೋಡುತ್ತಿದ್ದು ನಿಪಿ-14(1) ಎಂದು ನ್ಯಾಯಾಧೀಶರ ಸಹಿಯನ್ನು ನೋಡುತ್ತಿದ್ದು ನಿಪಿ-14(1ಎ) ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ಈಗ ನೋಡುತ್ತಿರುವ 2 ಫೋಟೋಗಳನ್ನು ತೆಗೆಸಿರುತ್ತೇನೆ. ಅದನ್ನು ನಿಪಿ-15 ಮತ್ತು 16 ಎಂದು ಗುರುತಿಸಲಾಯಿತು. ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾಸಾ-7ರವರಿಗೆ ವಹಿಸಿಕೊಟ್ಟಿರುತ್ತೇನೆ.

4.ದಾಳಿ ಸಮಯದಲ್ಲಿ ನಮ್ಮ ಅಬಕಾರಿ ಕಛೇರಿಯಲ್ಲಿ ನಾನು ಅಬಕಾರಿ ನಿರೀಕ್ಷಕಳಾಗಿದ್ದೆನು. ಇಬ್ಬರು ಅಬಕಾರಿ ಉಪನಿರೀಕ್ಷಕರಹುದ್ದೆಯಲ್ಲಿ ಒಂದು ಖಾಲಿ ಇತ್ತು, ಓರ್ವ ಉಪನಿರೀಕ್ಷಕರು ನನ್ನ ಜೊತೆ ದಾಳಿಗೆ ಬಂದಿದ್ದರು, ಆದ್ದರಿಂದ ಠಾಣಾಧಿಕಾರಿ ಯಾರೂ ಇರಲಿಲ್ಲ, ನಾನೇ ಇನ್ವೆಂಟರಿಯನ್ನು ಮಾಡಿಸಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ** ಶ್ರೀ ಎಂ ಎ ಎಂ **ವಕೀಲರಿಂದಃ**

ನನಗೆ ಮಾಹಿತಿ ಬಂದಾಗ ಬೆಳಿಗ್ಗೆ 8-15 ಗಂಟೆ ಆಗಿತ್ತು. ನನಗೆ ನೀಡಿದ ಮಾಹಿತಿಯಲ್ಲಿ ನಿಖರವಾಗಿ ವಾಹನ ಸಂಖ್ಯೆ ತಿಳಿಸಿರುತ್ತಾರೆ. ಅವರು ವಾಹನದ ಸಂಖ್ಯೆಯನ್ನು ನಿಖರವಾಗಿ ಹೇಳಿದ್ದರಿಂದ ಕೂಡಲೇ ಕೇಸು ದಾಖಲಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನಮ್ಮ ಇಲಾಖೆಯಲ್ಲಿ ನಾವು ಆ ರೀತಿ ಮೊದಲು ಕೇಸು ದಾಖಲಿಸುತ್ತಿರಲಿಲ್ಲ, ಈಗ ಬಿ ಎನ್ ಎಸ್ ಕಾಯಿದೆ ಜಾರಿಗೆ ಬಂದ ನಂತರ ಮಾಡುತ್ತಿದ್ದೇವೆ ಎನ್ನುತ್ತಾರೆ.

2.ಆರೋಪಿ ಅಚ್ಚುಕಟ್ಟಾಗಿ ಕನ್ನಡ ಮಾತನಾಡುತ್ತಿದ್ದನು. ನಾನು ಠಾಣೆಯನ್ನು ಬಿಟ್ಟಾಗ ಸುಮಾರು 8-25 ಗಂಟೆ ಆಗಿತ್ತು. ಕೃತ್ಯ ನಡೆದ ಸ್ಥಳದಿಂದ ನಮ್ಮ ಠಾಣೆಗೆ ಅಂದಾಜು 20-22 ಕಿಮಿೀ

ದೂರ. ಠಾಣೆಯಿಂದ ನಾನು, ಚಾಸಾ-4 ರಿಂದ 6 ರವರು ಹೋದೆವು. ಪಂಚರು ಹಿರಿಸಾವೆ ಬಸ್ ನಿಲ್ದಾಣದಲ್ಲಿ ಇದ್ದರು, ಅಲ್ಲಿಗೆ ಸ್ವತಃ ನಾವೇ ಹೋಗಿ ನೋಟೀಸು ನೀಡಿದೆವು. ಹಿರಿಸಾವೆ ಬಸ್ ನಿಲ್ದಾಣದಿಂದ ಕೃತ್ಯನಡೆದ ಸ್ಥಳಕ್ಕೆ ಅಂದಾಜ ಒಂದು ಕಿಮಿ಼ ದೂರ ಆಗುತ್ತದೆ. ದಾಳಿಗೆ ಹೋಗುವ ಸಮಯದಲ್ಲಿ ಪತ್ರಾಂಕಿತ ಅಧಿಕಾರಿಯನ್ನು ಕರೆದುಕೊಂಡು ಹೋಗಲು ತೊಂದರೆ ಇರಲಿಲ್ಲ. ಪತ್ರಾಂಕಿತ ಅಧಿಕಾರಿಯ ಸಮಕ್ಷಮದಲ್ಲಿ ದಾಳಿ ಮಾಡಬೇಕೆಂದು ಇದೆ ಎಂದರೆ ಸಾಕ್ಷಿಯು ಗಾಂಜಾವನ್ನು ಸಾಗಾಣಿಕೆ ಮಾಡುವಾಗ ಅವಶ್ಯಕತೆ ಇರುವುದಿಲ್ಲ ಎನ್ನುತ್ತಾರೆ.

3.ಘಟನಾ ಸ್ಥಳಕ್ಕೆ ಹೋದಾಗ ಸಮಯ ಸುಮಾರು 8-50 ಗಂಟೆ ಆಗಿತ್ತು. ಈ ವಾಹನವನ್ನು ಪರಿಶೀಲಿಸುವುದಕ್ಕಿಂತ ಪೂರ್ವದಲ್ಲಿ 4 ವಾಹನಗಳನ್ನು ಪರಿಶೀಲನೆ ಮಾಡಿರುತ್ತೇವೆ. ಅವೆಲ್ಲವೂ 4 ಚಕ್ರದ ವಾಹನಗಳಾಗಿದ್ದವು, ನೋಂದಣಿ ಸಂಖ್ಯೆ ನೆನಪಿಲ್ಲ. 7-8 ನಿಮಿಷ ತಪಾಸಣೆ ಮಾಡಿರುತ್ತೇವೆ. ಆ ರಸ್ತೆಯಲ್ಲಿ ಬೆಳಿಗ್ಗೆ ಸಮಯದಲ್ಲಿ ತುಂಬಾ ವಾಹನಗಳು, ಶಾಲಾ ವಾಹನಗಳು ಓಡಾಡುತ್ತವೆ ಎಂದರೆ ಸಾಕ್ಷಿಯು ನಾನು ಶ್ರವಣಬೆಳಗೊಳ ಮಾರ್ಗದಿಂದ ಬರುವಂತಹ ವಾಹನಗಳನ್ನು ಮಾತ್ರ ಚೆಕ್ ಮಾಡುತ್ತಿದ್ದೆನು, ಆಗ ಈ ವಾಹನ ಸೇರಿದಂತೆ ಒಟ್ಟು 5 ವಾಹನಗಳು ಮಾತ್ರ ಬಂದಿದ್ದವು ಎನ್ನುತ್ತಾರೆ. ನನ್ನ ಮಹಜರಿನಲ್ಲಿ ಶ್ರವಣಬೆಳಗೊಳ ಕಡೆಯಿಂದ ಬರುವ ವಾಹನಗಳನ್ನು ಮಾತ್ರ ತಪಾಸಣೆ ಮಾಡಿರುತ್ತೇನೆಂದು ಬರೆದಿಲ್ಲ. ಬಾತ್ಮಿದಾರರು ಶ್ರವಣಬೆಳಗೊಳದ ಕಡೆಯಿಂದ ಹಿರಿಸಾವೆ ಕಡೆಗೆ ಆ ದ್ವಿಚಕ್ರ ವಾಹನ ಬರುತ್ತಿದೆ ಎಂದು ಹೇಳಿದ್ದರು. ಸದರಿ ವಾಹನದ ಇಂಜಿನ್ ಮತ್ತು ಚಾಸಿಸ್ ನಂಬರನ್ನು ನಮೂದು ಮಾಡಿಲ್ಲ. ನಮೂದು ಮಾಡಲು ತೊಂದರೆ ಇರಲಿಲ್ಲ. ಸದರಿ ವಾಹನದಲ್ಲಿ ನೋಂದಣಿ ಸಂಖ್ಯೆ ಮತ್ತು ಯಾವ ಕಂಪೆನಿಯ ವಾಹನ ಎಂದು ನಮೂದನೆ ಇತ್ತು. ಬೇರೆ ಯಾವ ಬರವಣಿಗೆಯನ್ನು ನಾನು ಗಮನಿಸಲಿಲ್ಲ.

4.ಪತ್ರಾಂಕಿತ ಅಧಿಕಾರಿಗಳು ಎಂದರೆ ಏನು ಎಂದು ಆರೋಪಿತರಿಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನಾವು ಅವರಲ್ಲಿ ಮನವರಿಕೆ ಮಾಡಿಕೊಟ್ಟಿರುತ್ತೇವೆ ಎನ್ನುತ್ತಾರೆ. ಪತ್ರಾಂಕಿತ ಅಧಿಕಾರಿ ಎಂದರೆ ಏನು ಎಂದು ಆರೋಪಿತರಿಗೆ ಮನವರಿಕೆ ಮಾಡಿಕೊಟ್ಟಿದ್ದೇವೆ ಎನ್ನುವ ವಿಚಾರವನ್ನು ಮಹಜರಿನಲ್ಲಿ

ಕಾಣಿಸಿಲ್ಲ. ಆರೋಪಿಯ ಸ್ವಇಚ್ಛಾ ಹೇಳಿಕೆಯಲ್ಲಿ ಹೇಳಿಲ್ಲ. ಆರೋಪಿಗೆ ಕನ್ನಡ ಸ್ಪಷ್ಟವಾಗಿ ಮಾತನಾಡಲು ಬರದೇ ಇರುವುದರಿಂದ ಪತ್ರಾಂಕಿತ ಅಧಿಕಾರಿ ಎಂದರೆ ಏನು ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ.

5.ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರನ್ನು ವಶಪಡಿಸಿಕೊಂಡಿರತ್ತೇನೆ, ಅದು ನ್ಯಾಯಾಲಯದ ಮುಂದೆ ಇಲ್ಲ, ಸಾಕ್ಷಿಯು ಮುಂದುವರಿದು ಮೇಲಧಿಕಾರಿಗಳ ಆದೇಶದಂತೆ ಅದನ್ನು ವಿಲೆ ಮಾಡಿರುತ್ತೇವೆ ಎನ್ನುತ್ತಾರೆ. ಅದನ್ನು ಯಾವಾಗ ವಿಲೆ ಮಾಡಿದ್ದು ಮತ್ತು ವಿಲೆ ಮಾಡಿದ ಬಗ್ಗೆ ನ್ಯಾಯಾಲಯದ ಗಮನಕ್ಕೆ ತಂದಿದ್ದೀರಾ ಎಂದರೆ ಸಾಕ್ಷಿಯು ಅದು ನಂತರದ ತನಿಖಾಧಿಕಾರಿಗೆ ಗೊತ್ತು ಎನ್ನುತ್ತಾರೆ. ನಾನು ಯಾವ ಆಧಾರದಲ್ಲಿ ಆ ಕವರನ್ನು ವಿಲೆ ಮಾಡಿದ್ದಾರೆಂದು ಹೇಳಿರುತ್ತೇನೆ ಎಂದರೆ ಸಾಕ್ಷಿಯು ನಾನು ಅದೇ ಕಛೇರಿಯಲ್ಲಿ ಕೆಲಸ ಮಾಡುತ್ತಿರುವುದರಿಂದ ಮತ್ತು ಕಛೇರಿಯ ಮುಖ್ಯಸ್ಥೆ ಆಗಿದ್ದರಿಂದ ವಿಲೆ ಮಾಡಿರುತ್ತಾರೆಂದು ಹೇಳಿರುತ್ತೇನೆ ಎನ್ನುತ್ತಾರೆ. ಮಹಜರ್ ಮೂಲಕ ವಶಪಡಿಸಿಕೊಂಡ ಪೂರ್ತ ಮುದ್ದೆ ಮಾಲು ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸಾಕ್ಷಿಯು ಹೌದು ರಾಸಾಯನಿಕ ವಿಶ್ಲೇಷಣೆಗೆ ತೆಗೆದ ಮುದ್ದೆಮಾಲು ಮಾತ್ರ ಇರುವುದು, ಉಳಿದುದ್ದನ್ನು ಮಾಲ್ಖಾನ್ ಗೆ ಹಸ್ತಾಂತರಿಸಿರುತ್ತೇವೆ ಎನ್ನುತ್ತಾರೆ.

6.ಇಲಾಖೆಗೆ ಸಂಬಂಧಪಟ್ಟ ತೂಕಮಾಪನದಿಂದಲೇ ತೂಕ ಮಾಡಿರುತ್ತೇವೆ. ಸದರಿ ತೂಕಮಾಪನ ಯಾವ ಕಂಪೆನಿಗೆ ಸೇರಿದ್ದೆಂದು ನಾನು ಗಮನಿಸಿಲ್ಲ. ಯಾವ ಕಂಪೆನಿಯ ತೂಕಮಾಪನ ಎಂದು ಮಹಜರಿನಲ್ಲಿ ಕಾಣಿಸಿಲ್ಲ. ವಶಪಡಿಸಿಕೊಂಡ ಗಾಂಜಾದ ಮೇಲೆ ಅಂಟಿಸಿದ ಮಾದರಿ ಚೀಟಿಯ ಮೇಲೆ ಪಂಚರ ಸಹಿ ಪಡೆದಿರುತ್ತೇವೆ. ಆ ಪಂಚರ ಸಹಿ ಇರುವ ಚೀಟಿ ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸಾಕ್ಷಿಯು ಹೌದು ಏಕೆಂದರೆ ನ್ಯಾಯಾಧೀಶರ ಮುಂದೆ ಇನ್ವೆಂಟರಿ ಮಾಡಿದಾಗ ತೆಗೆದ ಮಾದರಿ ಮುದ್ದೆಮಾಲನ್ನು ಪ್ಯಾಕು ಮಾಡಿ ಹಾಜರಿದ್ದ ನಮ್ಮ ಇಲಾಖಾ ಸಿಬ್ಬಂದಿಗಳ ಸಹಿ ಹಾಕುತ್ತೇವೆ, ಪಂಚರ ಸಹಿ ಇರುವ ಚೀಟಿ ಇದ್ದ ಕವರನ್ನು ಮಾಲ್ಖಾನ್ ಗೆ ಕಳುಹಿಸಿರುತ್ತೇವೆ ಎನ್ನುತ್ತಾರೆ. ನಾವು ದಾಳಿ ಸಮಯದಲ್ಲಿ ವಶಪಡಿಸಿಕೊಂಡ ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್ ಮತ್ತು ಗಾಂಜಾ ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸಾಕ್ಷಿಯು ಹೌದು, ಮಾಲ್ಖಾನ್ ಗೆ ಕಳುಹಿಸಿರುತ್ತೇವೆ, ರಾಸಾಯನಿಕ ಪರೀಕ್ಷೆಗೆ

ತೆಗೆದದ್ದು ಇಲ್ಲಿ ಇದೆ ಎನ್ನುತ್ತಾರೆ. ಮಹಜರು ಮಾಡಿದ 5 ದಿನಗಳ ನಂತರ ಇನ್ವೆಂಟರಿ ಮಾಡಿಸಿರುತ್ತೇನೆ. ವಿಳಂಬವಾಗಲು ಏನು ಕಾರಣ ಎಂದರೆ ಸಾಕ್ಷಿಯು ನಾನು 3-11-22ರಂದು ನ್ಯಾಯಾಧೀಶರಿಗೆ ಮನವಿ ಸಲ್ಲಿಸಿದ್ದೆನು, ಅವರು 8-11-22ರಂದು ಬರುವಂತೆ ನಮಗೆ ತಿಳಿಸಿದ್ದರು ಎನ್ನುತ್ತಾರೆ. 20ಗ್ರಾಂನ್ನು ತೂಕಮಾಪನದಲ್ಲಿ ತೂಕ ಮಾಡಿ ತೆಗೆದಿರುತ್ತೇವೆ. ಈ ಬಗ್ಗೆ ಇನ್ವೆಂಟರಿಯಲ್ಲಿ ನಮೂದು ಮಾಡಿಲ್ಲ.

7.ಸದರಿ ವಾಹನ ಆರೋಪಿಗೆ ಸಂಬಂಧಪಟ್ಟದ್ದಲ್ಲ ಎಂದರೆ ಸಾಕ್ಷಿಯು ಆರೋಪಿ ತನ ಸ್ವಇಚ್ಛಾ ಹೇಳಿಕೆಯಲ್ಲಿ ಚಂದ್ರೇಗೌಡ ಎಂಬುವವರಿಗೆ ಸೇರಿದ್ದೆಂದು ಹೇಳಿರುತ್ತಾರೆ ಎನ್ನುತ್ತಾರೆ. ಆರೋಪಿಯು ಬೇರೆ ರಾಜ್ಯದಿಂದ ಕೂಲಿ ಕೆಲಸಕ್ಕೆ ಬಂದದ್ದು ಎಂದರೆ ಸಾಕ್ಷಿಯು ಆರೊಪಿಯನ್ನು ವಿಚಾರ ಮಾಡಿದಾಗ ಆತ ಕೂಡ ಆ ವಿಚಾರ ಹೇಳಿದ್ದಾನೆ, ಹಾಗೆಯೇ ತಾನು ಊರಿನಿಂದ ಟ್ರೇನ್ ನಲ್ಲಿ ಬರುವಾಗ ಗಾಂಜಾವನ್ನು ತಂದಿರುತ್ತೇನೆ ಎಂದು ಕೂಡ ಹೇಳಿರುತ್ತಾನೆ ಎನ್ನುತ್ತಾರೆ. ಆ ವಿಚಾರ ಮಹಜರಿನಲ್ಲಿ ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ಠಾಣೆಯಲ್ಲಿ ವಿಚಾರಿಸಿದಾಗ ಹೇಳಿರುತ್ತಾನೆ, ಆದ್ದರಿಂದ ಮಹಜರಿನಲ್ಲಿ ನಮೂದಿಸಿಲ್ಲ ಎನ್ನುತ್ತಾರೆ. ತಾನು ಊರಿನಿಂದ ಬರುವಾಗಲೇ ತಂದಿರುವುದಾಗಿ ಹೇಳಿ ಆರೋಪಿಯ ಸ್ವಇಚ್ಛಾ ಹೇಳಿಕೆಯಲ್ಲಿ ನಮೂದಾಗಿರುತ್ತದೆ. ಅದನ್ನು ಎಲ್ಲಿ ಇಟ್ಟಿದ್ದ ಎಂದು ನಾನು ವಿಚಾರಣೆ ಮಾಡಿಲ್ಲ. ಆರೋಪಿಗೆ ಕನ್ನಡ ಬರದೇ ಇದ್ದುದರಿಂದ ಆ ವ್ಯಕ್ತಿ ನನ್ನ ಮುಂದೆ ಸ್ವಇಚ್ಛಾ ಹೇಳಿಕೆಯನ್ನು ನೀಡಿಲ್ಲ ನನಗೆ ಬೇಕಾದ ರೀತಿಯಲ್ಲಿ ಬರೆದುಕೊಂಡು ಆತನನ್ನು ಸಿಲುಕಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ಆ ರೀತಿ ಮಾಡುವುದಾದರೆ ಈ ವ್ಯಕ್ತಿ ಬೇಕಾಗಿರಲಿಲ್ಲ ಎನ್ನುತ್ತಾರೆ.

8.ಸದರಿ ಗಾಂಜಾಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಿನಂಕ 29-10-22ರಂದು ನಾನು ಯಾವುದೇ ದಾಳಿ ನಡೆಸಿಲ್ಲ, ಠಾಣೆಯಲ್ಲಿ ಕುಳಿತು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-7ರಿಂದ 10ರಲ್ಲಿ ಯಾವ ದಿನಾಂಕದಂದು ತೆಗೆದದ್ದು ಎಂದು ದಿನಾಂಕ ನಮೂದು ಇಲ್ಲ ಎಂದರೆ ಸರಿ. ನನ್ನ ಮೊಬೈಲ್ ನಿಂದ ಆ ಫೋಟೋ ತೆಗೆಸಿರುತ್ತೇನೆ. ಅದು ಒನ್ ಪ್ಲಸ್ ಒನ್ ಮೊಬೈಲ್. ಈ ಮೊಬೈಲ್ ನಿಂದ ಫೋಟೋ ತೆಗೆದಿರುತ್ತೇನೆಂದು ನನ್ನ ದೃಢಪತ್ರದಲ್ಲಿ ಕಾಣಿಸಿಲ್ಲ

ಎಂದರೆ ನಿಜ. ಆ ದೃಢಪತ್ರದಲ್ಲಿ ಸಂಪೂರ್ಣ ವಿವರ ಕಾಣಿಸಬೇಕು ಎಂದರೆ ನಿಜ. ಆರೋಪಿತರಿಗು ಈ ಕೇಸಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಸುಳ್ಳು ಕೇಸು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಾಹನವನ್ನು ಬಿಡಿಸಿಕೊಂಡ ಬಗ್ಗೆ ನ್ಯಾಯಾಲಯದಲ್ಲಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಗಾಂಜಾಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಸೃಷ್ಟಿಸಿ ಇನ್ವೆಂಟರಿ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ಎಂ.ಒ.1ಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ-15 ಮತ್ತು 16ರಲ್ಲಿ ದಿನಾಂಕ ಇಲ್ಲ ಎಂದರೆ ಸರಿ. ಸಾಕ್ಷಿಯು ಅದಕ್ಕೆ ಸಂಬಂಧಪಟ್ಟ ದಾಖಲೆ ಇದೆ ಎನ್ನುತ್ತಾರೆ. ಕೃತ್ಯನಡೆದಿದೆ ಎಂದು ಹೇಳುವ ಸ್ಥಳದಲ್ಲಿ ಮಹಜರು ನಡೆಸಿದ್ದೇ ಆಗಿದ್ದಲ್ಲಿ ಆರೊಪಿತರ ಸಹಿ ಪಡೆದುಕೊಳ್ಳುತ್ತಿದ್ದೆ ಎಂದರೆ ಸಾಕ್ಷಿಯು ಆರೊಪಿತರ ಸಹಿ ಪಡೆದುಕೊಳ್ಳುವುದಿಲ್ಲ ಎನ್ನುತ್ತಾರೆ. ಈ ಕೇಸಿಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಸೃಷ್ಟಿತ ಕೇಸಿಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**